Sri S. SIVAPPA.—Can preaching of religion also be treated as an educational institution ?

Sri M. V. KRISHNAPPA.—We are not giving land to any religions institution.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ರಿಲಿಜಿಯಸ್ ಇನ್‌ಸ್ಟಿಟ್ಯೂಷನ್ಸ್ ಎಜುಕೇಷನರ್ ಇನ್‌ಸ್ಟಿಟ್ಯೂಷನ್ಸ್ ನವರಿಗೆ ಜಮೀನು ಕೊಡುವುದೆ ತಪ್ಪಾಗುವುದಿಲ್ಲ. ಎಜುಕೇಷನರ್ ಇನ್‌ಸ್ಟಿಟ್ಯೂಷನ್ಸ್‌ಗೆ ಕೊಟ್ಟರೆ ತಕರಾರು ಇಲ್ಲ. ಆದರೆ ರಿಲಿಜಿಯಸ್ ಇನ್‌ಸ್ಟಿಟ್ಯೂಷನ್ಸ್, ಎಜುಕೇಷನರ್‌ಗೆ ಕೊಟ್ಟು ಜಮೀನಿನಿಂದ ಬರುವ ಉತ್ಪತ್ತಿಯನ್ನು ರಿಲಿಜಿಯಸ್ ಇನ್‌ಸ್ಟಿಟ್ಯೂಷನ್ಸ್‌ಗೆ ಪೆಚ್ಚೆ ಮಾಡಿದರೆ ಏನು ಮಾಡುತ್ತೀರಿ ?

Mr. SPEAKER.—It is a hypothetical question.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಎಜುಕೇಷನರ್ ಇನ್‌ಸ್ಟಿಟ್ಯೂಷನ್ಸ್‌ಗೆ ಖರ್ಚುಮಾಡಿದ್ದರೆ ಏನು ಮಾಡುತ್ತೀರಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ರಿಲಿಜಿಯಸ್ ಇನ್‌ಸ್ಟಿಟ್ಯೂಷನ್ಸ್‌ಗೆ ಜಮೀನು ಕೊಡುವಾಗ, ಲೀಸ್ ಕೊಡುವುದು 99 ಪರ್ಸೆಂಟು, 30 ವರ್ಷದ ಲೀಸ್‌ನಲ್ಲಿ ಕೊಡುತ್ತೇವೆ. If there is any violation of any condition, the lease will be revoked.

Grant of Land to Displaced Ryots.

*Q.—236. Sri T. D. DEVENDRAPPA (Bhadravathi).—

Will the Government be pleased to state :—

(*a*) whether it is a fact that the displaced ryots of Karehalli village, Kasaba Hobli, Bhadravathi Taluk have constructed houses in S. No. 22 in the sites provided for the houses, panchayat hall, school, temple, drinking water well, etc. ;

(*b*) whether it is not a fact that three years ago the landless and the poor people of the village were granted lands in the above S. No. under darkhast rules ;

(*c*) whether it is also not a fact that the said grantees are cultivating the lands and are paying land revenue ;

(*d*) the number of persons to whom lands have been granted in the said S. No. ;

(*e*) whether they are aware that most of the grantees belonged to backward classes ?

A.—Sri M. V. KRISHNAPPA (Minister for Revenue).—

(*a*) Yes.

(*b*) During May 1963 lands were granted.

(*c*) Yes.

(*d*) 45.

(*e*) Yes.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಸ್ವಾಮಿ, ಭದ್ರಾವತಿ ತಾಲ್ಲೂಕಿನಲ್ಲಿ ಸರ್ವೆ ನಂಬರ್ 22ರಲ್ಲಿ ಸ್ವಳಾಂತರಿಸಲ್ಪಟ್ಟ ರೈತರಿಗೆ ಮನೆಗಳನ್ನು ಕಟ್ಟುವುದರ ಬಗ್ಗೆ ಎಷ್ಟು ಸೈಟುಗಳನ್ನು ಮಾಡಿ ಕೊಟ್ಟಿದ್ದೀರಿ? ಮತ್ತು ಪಂಚಾಯತಿ ಹಾಲ್, ಪಾಠಶಾಲೆ, ದೇವಸ್ಥಾನ, ಕುಡಿಯುವ ನೀರಿನ ಬಾವಿ, ಶಾಲಾ ಕಟ್ಟಡಗಳನ್ನು ಎಷ್ಟು ಮಾಡಿದ್ದೀರಿ?

Mr. SPEAKER.—Why did the Hon'ble Member not include in the question itself?

Sri M. V. KRISHNAPPA.—I don't know the particulars. I want Notice.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಅವರು ಉತ್ತರದಲ್ಲಿ ಕೊಟ್ಟಿರುವುದೆಲ್ಲಾ ನಿಜವೆಂದು ಹೇಳಿದ್ದೀರಿ, ಎಷ್ಟು ಎಕರೆ ಭೂಮಿಯಲ್ಲಿ ಸೈಟುಗಳನ್ನು ಮಾಡಿದ್ದೀರಿ?

ಶ್ರೀ ಎಂ. ವಿ. ಕೃಷ್ಣಪ್ಪ.—ಸುಮಾರು 300 ಎಕರೆ ಭೂಮಿಯಲ್ಲಿ 100 ಎಕರೆ ಶುಗರ್ ಫ್ಯಾಕ್ಟರಿಯಿಂದ ತೆಗೆದುಕೊಂಡು, ಅದರಿಂದ 35 ಎಕರೆ ಮನೆಗಳಿಗೋಸ್ಕರ ಇಟ್ಟುಕೊಂಡು, ಮಿಕ್ಕ ಭೂಮಿಯನ್ನು ಹಿಂದಿನ ಜಿಲ್ಲಾಧಿಕಾರಿಗಳು ಬೇರೆ ರೈತರಿಗೆ ಸ್ಯಾಂಕ್ಷನ್ ಮಾಡಿದ್ದಾರೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಆ ಮೇರೆ 45 ಜನರಿಗೆ ಭೂಮಿಯನ್ನು ಕೊಟ್ಟಿದೆ ಎಂದು ತಮ್ಮ ವರದಿಯಲ್ಲಿ ತಿಳಿಸಿದ್ದೀರಿ. ಹಾಗೆ ಕೊಟ್ಟಿರತಕ್ಕಂತಹ ಭೂಮಿಯನ್ನು ಹಿಂದುಳಿದ ಜನಗಳಿಗೆ ಹಿಂದಿನ ಜಿಲ್ಲಾಧಿಕಾರಿಗಳು ಕೊಟ್ಟಿರುವುದನ್ನು ಈಗಿನ ಜಿಲ್ಲಾಧಿಕಾರಿಗಳು, ಸಾಗುವಳಿ ಚೀಟಿಯನ್ನು ವಾಪಸು ಕೊಡಬೇಕೆಂದು, ಜಮೀನನ್ನು ಶುಗರ್ ಫ್ಯಾಕ್ಟರಿಯವರಿಗೆ ಬಿಟ್ಟು ಬಿಡಬೇಕೆಂದು ಸರ್ಕಾರಕ್ಕೆ ಪತ್ರ ಬರೆದ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಡಿದೆ?

ಶ್ರೀ ಎಂ. ವಿ. ಕೃಷ್ಣಪ್ಪ.—ಎರಡು ಮೂರು ರಿಪೋರ್ಟ್ ಬಂದಿದೆ. ಆ ಜಮೀನುಗಳಲ್ಲಿ ಮನೆಗಳನ್ನೆಲ್ಲಾ ಕಟ್ಟಿದ್ದರೂ ಅಥವಾ ಇನ್ನೇನಾದರೂ ಮಾಡಿದರೂ, ಅದಕ್ಕೇನಾದರೂ ತೊಂದರೆಯಾಗದ ರೀತಿಯಲ್ಲಿ, ನ್ಯಾಯವಾದ ರೀತಿಯಲ್ಲಿ ತೀರ್ಮಾನ ಮಾಡಬೇಕೆಂದು ಸರ್ಕಾರ ಯೋಚನೆ ಮಾಡಿದೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಈಗ ಸಾಗುವಳಿ ಮಾಡಿದ್ದಾರೆ, ಮನೆಗಳನ್ನು ಕಟ್ಟಿದ್ದಾರೆ, ಬಾವಿಗಳನ್ನು ತೋಡಿಸಿದ್ದಾರೆ, ಇತ್ಯಾದಿಗಳನ್ನು ತಾವು ಒಪ್ಪಿಕೊಂಡಿದ್ದೀರಿ. ಹೀಗಿರುವಾಗ ಅದನ್ನು ಯಾವ ಕಾರಣದಿಂದಲೂ ಕೂಡಾ ಬದಲಾಯಿಸದಂತೆ ಸರ್ಕಾರ ನೋಡಿಕೊಳ್ಳುತ್ತದೆಯೇ?

ಶ್ರೀ ಎಂ. ವಿ. ಕೃಷ್ಣಪ್ಪ.—ತಾಲ್ಲೂಕು ಪ್ರತಿನಿಧಿಗಳು ಸೇರಿ ಹಾಗೇ ಮಾಡೋಣ.

ಶ್ರೀ ಎಸ್. ಗೋಪಾಲ ಗೌಡ.—ಈ ಪ್ರದೇಶವನ್ನು ಶಾಶ್ವತ ಮುಳುಗಡೆಯಾಗತಕ್ಕಂತಹ ಪ್ರದೇಶದ ಜನಗಳ ಪುನರ್‌ವಸತಿಗಾಗಿ ಕಾದಿರಿಸಲಾಗಿತ್ತು; ಅಲ್ಲವೆ?

ಶ್ರೀ ಎಂ. ವಿ. ಕೃಷ್ಣಪ್ಪ.—ಈಗ ಅವರು ಕೇಳುತ್ತಿರುವುದು ಅದಲ್ಲ. 100 ಎಕರೆ ತುಂಗಭದ್ರಾ ಶುಗರ್ ಫ್ಯಾಕ್ಟರಿಗೆ ಸಂಬಂಧಪಟ್ಟದ್ದು. ಇದನ್ನು ಶರಾವತಿ ಡಿಸ್‌ಪ್ಲೇಸ್ಡ್ ಪರ್ಸನ್‌ಗೋಸ್ಕರ ರಿಸರ್ವ್ ಮಾಡಿಲ್ಲ.

ಶ್ರೀ ಬಿ. ಚೆನ್ನಿರಪ್ಪಾಜಿ.—ಸ್ವಾಮಿ, ಜಮೀನು ಮಂಜೂರು ಮಾಡುವಾಗ ಅದರಲ್ಲಿ ಯಾರ ಹಸ್ತಕ್ಷೇಪವಿಲ್ಲದೇನೇ ಮಂಜೂರು ಮಾಡುವುದಕ್ಕೆ ಆಗುತ್ತದೆಯೇ?

ಶ್ರೀ ಎಂ. ವಿ. ಕೃಷ್ಣಪ್ಪ.—ಯೋಚನೆ ಮಾಡುತ್ತೇವೆ.

Allotment of Fisheries Launches.

*Q.—258. Sri R. S. HEGDE (Honnavar).—

Will the Government be pleased to state :—

(*a*) the number of Fisheries launches proposed to be allotted to the fishermen trainees during the current year;

(*b*) the basis for distribution of the mechanised launch?

A.—Sri B. RACHAIAH (Minister for Forests and Fisheries).—

(*a*) 54.